ಮಾನವ ಚೇತನಕ್ಕೆ ಅಸಾಧ್ಯವಾದುದು ಯಾವುದೂ ಇಲ್ಲ ಎನ್ನುವ ಮಾನವರ ಸಂಕಲ್ಪ ಬಲದ ಜಾಗರಣೆಯ ಬಗೆಗಿನ ನಂಬಿಕೆ ಮತ್ತು 'ಪ್ರಕೃತಿ ಗುರು' ವಿನಿಂದ ಮಾನವ ಕಲಿಯಬಹುದಾದ ಪಾಠಗಳ ಬಗ್ಗೆ ಇರುವ ನಂಬಿಕೆ – ಈ ಎರಡರ ಬಲದಿಂದ ಅಲ್ಲಮನೆನ್ನುವ ಅಪರೂಪ ರೂಪುಗೊಂಡಿದ್ದಿರಬೇಕು ಎನ್ನುವ ಸಾಧ್ಯತೆಯ ಶೋಧವಾಗಿದೆ ಈ ಕೃತಿ. ಈ ಎರಡಲ್ಲದೆ, ಶರಣ ಚಳವಳಿಯ ಮುಖ್ಯ ವ್ಯಕ್ತಿತ್ವಗಳು ಒಬ್ಬರು ಇನ್ನೊಬ್ಬರನ್ನು ತಿದ್ದಿ ತೀಡಿದ, ಸ್ಫಟಿಕದ ಪಾರದರ್ಶಕತೆಯಲ್ಲಿ, ಪ್ರಾಮಾಣಿಕತೆಯಲ್ಲಿ ತಂತಮ್ಮ ಸವಾಲುಗಳನ್ನು, ಮಿತಿಗಳನ್ನು, ದೃಷ್ಟಿಕೋನಗಳನ್ನು ಹಂಚಿಕೊಂಡ, ಓರೆಕೋರೆಗಳನ್ನು ಸರಿಪಡಿಸಿಕೊಳ್ಳಲು ನಡೆಸಿದ ಪ್ರಯತ್ನಗಳ ಭಿತ್ತಿಯೊಂದನ್ನು ಸೃಷ್ಟಿಸಿಕೊಂಡಿರುವುದು. ಮುಕ್ತ ಮನಸ್ಸಿನ ತಂಡವೊಂದು ತನ್ನ ಡೊಂಕುಗಳನ್ನು ಸರಿಪಡಿಸಿಕೊಳ್ಳಲು ಬೇಕಾದ ಮನಸ್ಥಿತಿಯನ್ನು ರಚಿಸಿಕೊಳ್ಳುವ ಬಲು ಕಷ್ಟದ ದಿವ್ಯಕ್ಕೆ ಒಡ್ಡಿಕೊಳ್ಳುವ ಸ್ಥಿತಿಯೇ ಇತರರಿಗೆ ದಾರಿದೀಪವಾಗುವ, ನೈತಿಕ ಬಲವನ್ನು ಕೊಡುವ ಆವರಣವೊಂದು ಸೃಷ್ಟಿಯಾಗುತ್ತಾ ಹೋಗುತ್ತದೆ. ಶರಣ ಚಳವಳಿಯ ಹಿಂದೆಂದೂ ಇಲ್ಲದ ಅಸಾಧಾರಣ ಚಳವಳಿಯೊಂದರ ಮೂಲ ಕಾರಣ ಮತ್ತು ಶಕ್ತಿಯಾಗಿ ಈ ಅಂಶವನ್ನು ಈ ಕೃತಿ ಮುನ್ನೆಲೆಗೆ ತರುತ್ತದೆ. ಅಲ್ಲಮ, ಬಸವಣ್ಣ, ಸಿದ್ದರಾಮ, ಅಕ್ಕ – ಈ ಎಲ್ಲರ ನಡುವೆ ಮುಚ್ಚುಮರೆಯೇ ಇಲ್ಲದ ಜೀವಸಂವಾದ ಸಾಧ್ಯವಾಗುತ್ತದೆ.

ಇದರಿಂದ ಇನ್ನೂ ಒಂದನ್ನು ಸುಮಂಗಲಾ ದಕ್ಕಿಸಿಕೊಂಡಿದ್ದಾರೆ. ಅಲ್ಲಮ ಮತ್ತು ಶರಣರ ನಡುವಿನ ಸಂಬಂಧದ ಬಗ್ಗೆ ಇದ್ದ ಸ್ಥಾಪಿತ ನಿಲುವೊಂದನ್ನು ಕಾದಂಬರಿ ನಿರಾಕರಿಸುತ್ತದೆ. ಅಲ್ಲಮ ಅಲೌಕಿಕವನ್ನು ಆರಿಸಿಕೊಂಡರೆ, ಬಸವಾದಿ ಶರಣರು ಲೌಕಿಕವನ್ನೇ ತಮ್ಮ ಮೊದಲ ಆದ್ಯತೆಯಾಗಿಸಿಕೊಂಡರು. ಹೀಗಾಗಿ ಅಲ್ಲಮ ಶರಣ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಿಲ್ಲ ಎನ್ನುವ ನಿಲುವು ಬಲವಾಗಿಯೇ ಇದೆ. ಆದರೆ ಅಲ್ಲಮ ಮತ್ತು ಇತರ ಶರಣರ ನಡುವೆ ಭಿನ್ನಾಭಿಪ್ರಾಯಗಳಿರಬಹುದು, ಆದರೆ ಅದು ಒಡೆದ ದಾರಿಯಾಗಿರಲಿಲ್ಲ. ಪೂರಕವಾದ ದಾರಿಯಾಗಿತ್ತು ಎನ್ನುವ ದೃಷ್ಟಿಕೋನವನ್ನು, ಶರಣ ಚಳವಳಿಯ ಭಿನ್ನವಿದ್ದೂ ಬೆರೆಯಬಹುದು ಎನ್ನುವ ಮೂಲಾಶಯದೊಂದಿಗೆ ಸುಮಂಗಲಾ ಬೆಸೆಯುತ್ತಾರೆ.

ಜನಪ್ರಿಯವಾಗಿರುವ ಅಲ್ಲಮ ಮತ್ತು ಸಿದ್ಧರಾಮರ ನಡುವಿನ ಸಂಘರ್ಷವನ್ನೇ ಇಲ್ಲಿ ಉದಾಹರಣೆಯಾಗಿ ನೋಡಬಹುದು. ಆ ಅಧ್ಯಾಯವನ್ನು ಸಾಕಷ್ಟು ದೀರ್ಘವಾಗಿಯೇ ಇಲ್ಲಿ ಬೆಳೆಸಲಾಗಿದೆ. ಕೆರೆ ಬಾವಿಗಳನ್ನು ತೋಡಿಸುತ್ತಾ, ಗುಡಿಗಳನ್ನು ಕಟ್ಟಿಸುತ್ತಾ ಮನೆಮಾತಾದವನು ಸಿದ್ಧರಾಮ. ಸಿದ್ಧರಾಮನು ಸಿದ್ಧರಾಮೇಶ್ವರನಾದುದು ಇಂಥ ಲೋಕಕಲ್ಯಾಣದ ಕೆಲಸಗಳಿಂದ. ಇಲ್ಲಿ ಎರಡು ಪ್ರಶ್ನೆಗಳಿವೆ ಅನ್ನಿಸುತ್ತದೆ ಅಲ್ಲಮನಿಗೆ. ಇದೇ ಬದುಕಿನ ಗಮ್ಯವೆ? ತಾನು ಮಾಡಿದೆ ಎನ್ನುವ ಅಹಂಕಾರ, ಅದಕ್ಕೆ ಇಂಬು ಕೊಡುವ ಹೊಗಳಿಕೆ – ಎರಡೂ ಸೇರಿ ಸಿದ್ಧರಾಮನೇನಾದಾನು? ಸಿದ್ಧರಾಮನನ್ನು ಈ ಅಪಾಯದಿಂದ ಪಾರು ಮಾಡಬೇಕೆನ್ನುವ ಹಂಬಲ ಹುಟ್ಟುತ್ತದೆ ಅಲ್ಲಮನಿಗೆ. ಎತ್ತರಕ್ಕೇರಬಲ್ಲ ಶಕ್ತಿಯಿರುವ ಸಿದ್ಧರಾಮ ಹೀಗೆ ಲೋಕದ ಮೆಚ್ಚುಗೆಯಲ್ಲಿ ತನ್ನ ಬದುಕನ್ನು ಮುಗಿಸಿಕೊಂಡು ಬಿಡಬಾರದೆಂದು ತೀರ್ಮಾನಿಸಿಯೇ ಅಲ್ಲಮ ಕಾಳಜಿ ಬೆರೆತ ಆದರೆ ವ್ಯಂಗ್ಯದಲ್ಲಿ ಇರಿಯುವಂತಹ ಮಾತುಗಳಿಂದ ಸಿದ್ಧರಾಮನನ್ನು ಪ್ರಶ್ನಿಸುತ್ತಾನೆ:

ಒಳಗ ತೊಳೆದು ಜಲವ ತುಂಬಲರಿಯದ ಅರೆ ಮರುಳನೇನಾದ ಹೇಳಿರೆ?
ಜಲದ ಸಮ್ಮವ ತೊಳೆಯಲರಿಯದೆಜಲವ ಬಯಸುವವನೆಂತಿರ್ಹ ಹೇಳಿರೆ?
ನೆಲವ ಶೋಧಿಸಿ, ನೆಲೆಯನರಿಯದೆ ಕೆರೆಯ ಕಟ್ಟಿಸುವ ಒಡ್ಡರ ರಾಮಯ್ಯನ ಇರವೆಂತು ಹೇಳಿರೆ?
ನಮ್ಮ ಗುಹೇಶ್ವರನ ನಿಲವನರಿಯದ ಮರುಳು ಸಿದ್ದರಾಮನೆಂತಿರ್ದಿಹ ಹೇಳಿರೆ?

ಸಿದ್ಧರಾಮನ ಲೋಕಕಲ್ಯಾಣದ ಹಾದಿಯನ್ನು ಇದು ವಿರೋಧಿಸುತ್ತಿಲ್ಲ, ಅದನ್ನು ಮುಂದುವರೆಸುವ, ವಿಸ್ತರಿಸುವ, ಕೊನೆಗೆ ಶಿವ ಸಾನ್ನಿಧ್ಯವೇ ಅಂತಿಮವಾಗಬೇಕಾದ ಸಾಧ್ಯತೆಯನ್ನು ಇದು ಹೇಳುತ್ತಿದೆ. ಶರಣರ ಶರಣ ಕಲ್ಪನೆಗೆ ಇದು ಹೊಂದುತ್ತಿದೆ. ಶರಣನಾದವನು 'ಮಾಡಿದೆ' ಎನ್ನಬಾರದು, ಎಂದುಕೊಳ್ಳಬಾರದು, ಎನ್ನಲು ಬಿಡಲೂ ಬಾರದು. ಶರಣರೆಂದರೆ ತನ್ನದನ್ನು ಲೋಕದ ಜೊತೆ ಸಂಬಂಧ ಕಟ್ಟಿಕೊಳ್ಳುವವನಲ್ಲ, ಲೋಕಕ್ಕಾಗಿ